ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು

ಸಂ. ಗಣಕಶಾಖೆ/ಎಸ್.ಎಸ್.ಎಲ್.ಸಿ/ಮಾ.ಉ/01/2017-18 ದಿನಾಂಕ 04/04/2018

## – ಸುತ್ತೋಲೆ –

ವಿಷಯ : ಏಪ್ರಿಲ್-2018 ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ಮಾದರಿ ಉತ್ತರಗಳ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸುವ ವಿಧಾನದ ಬಗ್ಗೆ

ಉಲ್ಲೇಖ : ಈ ಕಛೇರಿಯ ಪತ್ರಿಕಾ ಪ್ರಕಟಣೆ ದಿನಾಂಕ 30/03/2018

ಏಪ್ರಿಲ್ -2018 ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ಮಾದರಿ ಉತ್ತರಗಳನ್ನು ಮಂಡಳಿಯ ಜಾಲತಾಣದಲ್ಲಿ ಈಗಾಗಲೇ ಪ್ರಕಟಿಸಲಾಗಿದ್ದು ಈ ಮಾದರಿ ಉತ್ತರಗಳಿಗೆ ಆಕ್ಷೇಪಣೆಗಳೇನಾದಾರೂ ಇದ್ದಲ್ಲಿ ಆನ್‌ಲೈನ್‌ನಲ್ಲಿಯೇ ಅವುಗಳನ್ನು ಮಂಡಳಿಗೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಈ ಕೆಳಕಂಡ ಅಂಶಗಳನ್ನು ಗಮನಿಸಿ ಅದರಂತೆ ಆಕ್ಷೇಪಣೆಗಳನ್ನು ಉಲ್ಲೇಖಿತ ಪತ್ರದಲ್ಲಿ ತಿಳಿಸಿರುವ ಕಾಲಾವಧಿಯಲ್ಲಿ ಸಲ್ಲಿಸುವುದು.

1) ಅಭ್ಯರ್ಥಿಗಳ ಪರೀಕ್ಷಾ ನೋಂದಣಿ ಸಂಖ್ಯೆಯನ್ನು ಉಪಯೋಗಿಸಿ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ.
2) http://www.kseeb.kar.nic.in ಜಾಲತಾಣದಲ್ಲಿ new user ನಲ್ಲಿ ಕ್ಲಿಕ್ ಮಾಡಿದ ನಂತರ ನೋಂದಣಿ ಮಾಡಿಕೊಂಡು ಆಕ್ಷೇಪಣೆಗಳನ್ನು ಸಲ್ಲಿಸಬೇಕು
3) ಅಭ್ಯರ್ಥಿಗಳು ತಮ್ಮ ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಓ.ಟಿ.ಪಿ ಪಡೆಯುವುದು
4) ಓ.ಟಿ.ಪಿ ಬಳಸಿ ಪಾಸ್‌ವರ್ಡ್ ರಚನೆ ಮಾಡಿಕೊಳ್ಳುವುದು (ಆರು ಅಕ್ಷರಗಳು ಮತ್ತು ಸಂಖ್ಯೆಗಳನ್ನೊಳಗೊಂಡ ಪದ)
5) ಪಾಸ್‌ವರ್ಡ್ ಮತ್ತೊಮ್ಮೆ ಟೈಪ್ ಮಾಡಿ ಖಚಿತವಡಿಸಿಕೊಳ್ಳುವುದು. ಕ್ಯಾಪ್ಚಾ (captcha) ಬಳಸಿ ನೋಂದಣಿ ಪೂರ್ಣಗೊಳಿಸುವುದು. (registered successfully ಎನ್ನುವ ಸಂದೇಶ ಬರುತ್ತದೆ)
6) ಮೊದಲಿನ ಪರದೆಯಲ್ಲಿ ತಮ್ಮ ಎಸ್.ಎಸ್.ಎಲ್.ಸಿ ನೋಂದಣಿ ಸಂಖ್ಯೆಯನ್ನು ಹಾಗು ಪಾಸ್‌ವರ್ಡ್ ಬಳಸಿ ಆಕ್ಷೇಪಣೆಗಳನ್ನು ಸಲ್ಲಿಸುವ ವಿಭಾಗವನ್ನು ಪ್ರವೇಶಿಸುವುದು.
7) ವಿಷಯ ಹಾಗು ಪ್ರಶ್ನೆಗಳ ಸಂಖ್ಯೆಗಳನ್ನು ಬಳಸಿ ಆಕ್ಷೇಪಣೆಗಳನ್ನು ಟೈಪ್ ಮಾಡಿ submit ಮಾಡುವುದು.
8) ಆಂಗ್ಲ ಭಾಷೆಯನ್ನು ಹೊರತಾಗಿ ಬೇರೆ ಭಾಷೆಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸುವುದಾದಲ್ಲಿ ಆಕ್ಷೇಪಣೆಗಳನ್ನು ಬೇರೆಯದೇ ವರ್ಡ್ ಫೈಲ್‌ನಲ್ಲಿ ಟೈಪ್ ಮಾಡಿಟ್ಟುಕೊಂಡು ಕಾಪಿ ಮಾಡಿಕೊಂಡ ನಂತರ ಆಕ್ಷೇಪಣೆಗಳನ್ನು ಸಲ್ಲಿಸುವ ಬಾಕ್ಸ್ ನಲ್ಲಿ ಪೇಸ್ಟ್ ಮಾಡುವುದು.

ಮೇಲ್ಕಂಡ ಪ್ರಕ್ರಿಯೆಯ ಮೂಲಕವಲ್ಲದೇ sadpi-cc-kseeb@ka.gov.in ವಿಳಾಸಕ್ಕೂ ಈ-ಮೈಲ್ ಮೂಲಕ ಆಕ್ಷೇಪಣೆಗಳನ್ನು ಕಳುಹಿಸಬಹುದಾಗಿದೆ.

(ಸುಮಂಗಲ. ವಿ)
ನಿರ್ದೇಶಕರು, ಪರೀಕ್ಷೆಗಳು

ಅಗತ್ಯ ಕ್ರಮಕ್ಕಾಗಿ : ಎಲ್ಲ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಇವರುಗಳಿಗೆ